


# ಗುರುದತ್ ಚಿತ್ರೋತ್ಸವ



ಗುರುದತ್ ಅವರು ಬದುಕಿದ್ದು ಕೇವಲ 39 ವರ್ಷ. ಅಷ್ಟರಲ್ಲೇ 'ಪ್ಯಾಸಾ', 'ಕಾಗಜ್ ಕೆ ಫೂಲ್' ತರಹದ ನೆನಪಿನಲ್ಲಿ ಉಳಿಯುವ ಚಿತ್ರಪಟಗಳನ್ನು ಉಳಿಸಿದರು. ಅವರ ಶತಮಾನೋತ್ಸವದ ನೆನಪಿನಲ್ಲಿ, ದೇಶದಾದ್ಯಂತ ಆಗಸ್ಟ್‌ನಲ್ಲಿ, ಅವರ ನಿರ್ದೇಶನದ ಚಿತ್ರಗಳ ಪ್ರದರ್ಶನ ನಡೆಯಲಿದೆ. ಗುರುದತ್ ದಕ್ಷಿಣ ಕನ್ನಡದವರು. ಅವರ ಕುಟುಂಬ ಕೆಲಸದ ನಿಮಿತ್ತ ಬಂಗಾಳಕ್ಕೆ ವಲಸೆ ಹೋದಾಗ ಅವರ ಬದುಕಿನ ದೃಷ್ಟಿಕೋನ ಬದಲಾಯಿತು. ಅಲ್ಲಿನ ಕಾರ್ಮಿಕವರ್ಗದವರ ಬದುಕನ್ನು ಹತ್ತಿರದಿಂದ ಕಂಡುಂಡರು. ಸಿನಿಮಾ ಕುರಿತ ಆಸಕ್ತಿ ಮೊಳೆತಿದ್ದು ಆಗಲೇ. 1940ರಲ್ಲಿ ಅವರು ಆಗಿನ ಬಾಂಬೆಗೆ ಸಿನಿಮಾ ಕನಸು ಹೊತ್ತು ಹೋದರು. ತಮ್ಮ ಹೆಸರಿನ ಜೊತೆಗೆ ಇದ್ದ ಪಡುಕೋಣೆ ಎಂಬ ಸಮುದಾಯ ಸೂಚಕ ಪದವನ್ನು ಅವರು ಅಳಿಸಿಕೊಂಡಿದ್ದು ಬಾಂಬೆಯಲ್ಲಿ. ದೇವ್ ಆನಂದ್ ಅವರಿಗೆ ಆಪ್ತರಾಗಿದ್ದ ಗುರುದತ್ ಮೊದಲು ಕೊರಿಯೋಗ್ರಫಿಯಲ್ಲಿ ಕೈ ಪಳಗಿಸಿಕೊಂಡರು. ದೇವ್ ಆನಂದ್ ನಟರಾಗಿ ದೊಡ್ಡ ಹೆಸರು ಮಾಡಿದ ಮೇಲೆ ಗುರುದತ್ ಅವರಿಗೆ ನಿರ್ದೇಶಕರಾಗುವ ಅವಕಾಶ ಒಲಿದುಬಂತು. 'ಆರ್ ಪಾರ್' ಹಾಗೂ 'ಮಿಸ್ಟರ್ ಅಂಡ್ ಮಿಸಸ್ 55' ಎಂಬ ಹಾಸ್ಯಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಗೆದ್ದವು. ಅದಕ್ಕೂ ಮೊದಲು ಅವರ ನಿರ್ದೇಶನದ 'ಬಾಜಿ' ಚಿತ್ರವು ಸದ್ದು ಮಾಡಿತ್ತು. ಗಾಯಕಿ ಗೀತಾ ರಾಯ್ ಅವರನ್ನು ಪ್ರೇಮಿಸಿದ್ದ ಗುರುದತ್, ಆ ಗುಂಗಿನಲ್ಲಿ ಬಹುಕಾಲ ಇದ್ದರು.

ಇಪ್ಪತ್ತಾರನೇ ವಯಸ್ಸಿನಲ್ಲೇ ಮೊದಲ ಚಿತ್ರ ನಿರ್ದೇಶಿಸಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲಿನ ದಶಕದ ಪಲ್ಲಟಗಳನ್ನು ಸೂಕ್ಷ್ಮವಾಗಿ ಗಮನಿಸಿದರು. 'ಪ್ಯಾಸಾ' ಚಿತ್ರದಲ್ಲಿ ಅಂತಹ ಸೂಕ್ಷ್ಮಗಳು ಇಡುಕಿರಿದಿವೆ. ಆ ಚಿತ್ರದಲ್ಲಿನ ವಿ. ಕೆ. ಮೂರ್ತಿ ಅವರ ಸಿನಿಮಾಟೋಗ್ರಫಿಯ ಚಳಕಗಳು ಇವತ್ತೂ ಸಿನಿಮಾ ವಿದ್ಯಾರ್ಥಿಗಳಿಗೆ ಅಧ್ಯಯನದ ಪರಿಕರಗಳಾಗಿ ಉಳಿದಿವೆ. ಬೆಂಗಳೂರಿನ ಮೂರ್ತಿ ಅವರ ಶತಮಾನೋತ್ಸವವು ಕಳೆದ ವರ್ಷ ನಡೆದದ್ದು ಎಷ್ಟೋ ಜನರಿಗೆ ಗೊತ್ತೇ ಇಲ್ಲ.

ಗುರುದತ್ ಅವರ ಚಿತ್ರಗಳ ಹಕ್ಕುಗಳನ್ನು ಪಡೆದಿರುವ ಅಲ್ಟ್ರಾ ಮೀಡಿಯಾ ಆ್ಯಂಡ್ ಎಂಟರ್ಟೈನ್ಮೆಂಟ್ ಸಂಸ್ಥೆಯು ಆಗಸ್ಟ್ 8ರಿಂದ ಹತ್ತರವರೆಗೆ ದೇಶದ ಹಲವೆಡೆ ಚಿತ್ರಗಳ ಪ್ರದರ್ಶನ ಆಯೋಜಿಸಿದೆ. ಗುರುದತ್ ಅವರ ಸೃಜನಶೀಲತೆಯನ್ನು ಮತ್ತೆ ನೋಡಿ, ಮಂಥನ ನಡೆಸಲು ದೊರೆತಿರುವ ಅಪರೂಪದ ಅವಕಾಶವಿದು. ತಮ್ಮದೇ ಬದುಕಿನ ತುಣುಕುಗಳನ್ನು ಸಿನಿಮಾ ಮಾಡುತ್ತಾ, ಮದ್ಯಪಾನದ ವ್ಯಸನದಿಂದಾಗಿ ಬೇಗ ಭೌತಿಕವಾಗಿ ಇಲ್ಲವಾದ ಗುರುದತ್ ಅವರ ಚಿತ್ರಗಳಂತೂ ಚಿರಸ್ಥಾಯಿಯಾಗಿವೆ.

# ಐಷಾರಾಮಿ ಕಾರುಗಳ ಸರದಾರ

ಒಂದು ಕಾಲದಲ್ಲಿ ಅಮೆರಿಕದಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳನ್ನು ಮಾರುತ್ತಾ ಬದುಕಿನ ಬಂಡಿ ದೂಡುತ್ತಿದ್ದವರು ಈಗ ಹಿಂದಿ ಕಿರುತೆರೆಯ ಪಳಗಿದ ನಟನಾಗಿ ಜನಪ್ರಿಯರಾಗಿದ್ದಾರೆ. ಅಷ್ಟೇ ಆಗಿದ್ದಿದ್ದರೆ ಇದು ಸುದ್ದಿಯೇನೂ ಅಲ್ಲ. ಅವರು ಇತ್ತೀಚೆಗೆ ಲ್ಯಾಂಬೋರ್ಗಿನಿ ಉರುಸ್ ಕಾರನ್ನು ತಮ್ಮ ಬೃಹತ್ ಗ್ಯಾರೇಜ್ ಒಳಗೆ ತಂದು ನಿಲ್ಲಿಸಿದರು.

ನಟರು ಅಥವಾ ನಟಿಯರು ಐಷಾರಾಮಿ ಕಾರು ಕೊಳ್ಳುವುದು ಹೊಸತೇನೂ ಅಲ್ಲ, ನಿಜ. ಆದರೆ ಈ ನಟ ಒಂದಲ್ಲ, ಹಲವು ಐಷಾರಾಮಿ ಹಾಗೂ ಅಪರೂಪದ ಕಾರುಗಳ ಸಂಗ್ರಹ ಹೊಂದಿದ್ದಾರೆ. ಆ ನಟನ ಹೆಸರು ರಾಮ್ ಕಪೂರ್.

'ಕಸಮ್ ಸೆ' ಹಾಗೂ 'ಬಡೇ ಅಚ್ಛೆ ಲಗ್ತೆ ಹೈ' ಧಾರಾವಾಹಿಗಳ ಮೂಲಕ ಮನೆಮಾತಾದ ರಾಮ್ ಕಪೂರ್ ಅತಿ ಹೆಚ್ಚು ಸಂಭಾವನೆ ಪಡೆಯುವ ಕಿರುತೆರೆಯ ನಟರಲ್ಲಿ ಒಬ್ಬರು. ಸಿನಿಮಾಗಳಲ್ಲಿಯೂ ಅವಕಾಶ ಪಡೆಯುತ್ತಿರುವ ಅವರು ಕೆಲವು ತಿಂಗಳುಗಳ ಹಿಂದೆ ತಮ್ಮ ದಢೂತಿ ದೇಹವನ್ನು ಕರಗಿಸಿಕೊಂಡು ಸಪೂರ ಆದರು. ಅವರ ಬಳಿ ಐಷಾರಾಮಿ ಕಾರುಗಳ ದೊಡ್ಡ ಸಂಗ್ರಹ ಇದ್ದು, ಅವುಗಳ ಒಟ್ಟಾರೆ ಮೌಲ್ಯ ಸುಮಾರು 22 ಕೋಟಿ ರೂಪಾಯಿ.

ತಂದೆ ಹಣಕಾಸು ವ್ಯವಹಾರ ನಡೆಸುತ್ತಿದ್ದರೂ, ಆ ಹಾದಿಯನ್ನು ಬಿಟ್ಟು ಅಭಿನಯದ ಮಹತ್ವಾಕಾಂಕ್ಷೆ ಈಡೇರಿಸಿಕೊಂಡ ರಾಮ್ ಕಪೂರ್ ಅವರಿಗೆ ಈಗ 51 ವರ್ಷ ವಯಸ್ಸು. ಕಾರುಗಳನ್ನು ಅವರು ಮಕ್ಕಳಂತೆ ನೋಡಿಕೊಳ್ಳುತ್ತಾರೆ ಎಂದೇ ಅವರ ಆಪ್ತೇಷ್ಟರು ಕೊಂಡಾಡುತ್ತಾರೆ.

